

## ಮಕ್ಕಳ ಕಣ್ಮರೆ ತಪ್ಪಿಸುವಲ್ಲಿ ಪೋಷಕರ ಪಾತ್ರ

ಮಕ್ಕಳ ಅಪಹರಣ ಎನ್ನುವುದು ಯಾವುದೇ ಪೋಷಕರಿಗೂ ಒಂದು ಅತ್ಯಂತ ಭಯಾನಕ ಹಾಗೂ ಕಹಿ ಅನುಭವ. ಹಾಗೆಂದ ಮಾತ್ರಕ್ಕೆ ಇಂತಹ ಅಪ್ರಿಯವಾದ ಸತ್ಯಗಳ ಬಗ್ಗೆ ಮಕ್ಕಳಲ್ಲಿ ತಿಳಿವಳಿಕೆ ಹಾಗೂ ಜಾಗೃತಿ ಮೂಡಿಸದೇ ಇದ್ದರೆ ನಾವಾಗಿ ಮಕ್ಕಳನ್ನು ಅಪಾಯದ ಕೂಪದಲ್ಲಿ ತಳ್ಳಿದಂತಾಗುತ್ತದೆ.

- ಸಣ್ಣ ವಯಸ್ಸಿನ ಮಕ್ಕಳಲ್ಲಿ ಅಪರಿಚಿತರಿಂದ ದೂರವಿರುವ ಬಗ್ಗೆ ಬೇರೆಯವರು ಕೊಡುವ ತಿಂಡಿ ತಿನಿಸುಗಳನ್ನು ತಿನ್ನದಂತೆ ಅಂತಹವರ ಜೊತೆ ಕರೆದಲ್ಲಿ ಹೋಗದಂತೆ ತಿಳಿವಳಿಕೆ ಮೂಡಿಸಬೇಕು.
- ಯಾರೇ ಆಗಲಿ ಅಗತ್ಯಕ್ಕಿಂತ ಹೆಚ್ಚಿನ ಸಂಬಳ ಅಥವಾ ಅನುಕೂಲಗಳನ್ನು ಒದಗಿಸುವ ಆಮಿಷ ಒಡ್ಡಿದರೆ ಎಚ್ಚರಿಕೆಯಿಂದ ವ್ಯವಹರಿಸುವುದು.
- ತಮ್ಮ ಮಕ್ಕಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಇರುವುದು. ಅಂಥದ್ದೇನಾದರೂ ಕಂಡು ಬಂದಲ್ಲಿ ಕೌನ್ಸೆಲಿಂಗ್ ಅಥವಾ ಅಪ್ಯಾಯತೆಯಿಂದ ಮಾತನಾಡುವ ಮೂಲಕ ಮುಂದಾಗಬಹುದಾದ ಅನಾಹುತಗಳನ್ನು ತಪ್ಪಿಸುವುದು.
- ಮಕ್ಕಳಿಗೆ ಸ್ವಾತಂತ್ರ್ಯ ಹಾಗೂ ಸ್ವೇಚ್ಛೆಗಳ ನಡುವಣ ವ್ಯತ್ಯಾಸದ ಅರಿವು ಮಾಡಿಕೊಡುವುದು.
- ಪೋಷಕರ ಬದುಕಿನಲ್ಲಿ ಬಿರುಕುಗಳು ಮೂಡಿದಾಗ ಯಾವುದೇ ಕಾರಣಕ್ಕೂ ಮಕ್ಕಳನ್ನು ದಾಳದಂತೆ ಉಪಯೋಗಿಸದಿರುವುದು. ವಿಚ್ಛೇದನ (ಡೈವೋರ್ಸ್) ದಂತಹ ವಿಷಯಗಳಲ್ಲಿ ಮಕ್ಕಳ ಮನಸ್ಥಿತಿಗಳನ್ನು ಅರ್ಥ ಮಾಡಿಕೊಂಡು ನಡೆಯುವುದು. ಅನೇಕ ಸಂಸ್ಥೆಗಳ ಅಧ್ಯಯನ ಹಾಗೂ ಅಂಕಿ ಅಂಶಗಳ ಪ್ರಕಾರ ಒಡೆದ ಕುಟುಂಬಗಳಿಂದ ಬರುವ ಮಕ್ಕಳು ಮನೆ ಬಿಟ್ಟು ಹೋಗುವ ಇಲ್ಲವೆ ಅನೇಕ ಅಪರಾಧಗಳಲ್ಲಿ ಭಾಗಿಯಾಗುವ ಸಂಭವಗಳು ಹೆಚ್ಚು.
- ಯಾವುದೇ ಕಾರಣಕ್ಕೂ ಎಂತಹುದೇ ತುರ್ತುಪರಿಸ್ಥಿತಿಯಲ್ಲೂ ಅಪರಿಚಿತರ ಹತ್ತಿರ ಮಕ್ಕಳನ್ನು ಬಿಟ್ಟು ಎಲ್ಲಿಗೂ ಹೋಗದೇ ಇರುವುದು.

ಭಾರತದಲ್ಲಿ ಪ್ರತಿ 8 ನಿಮಿಷಗಳಿಗೆ ಒಬ್ಬರಂತೆ ಮಕ್ಕಳು ಕಣ್ಮರೆಯಾಗುತ್ತಾರೆ. ಪೊಲೀಸರಲ್ಲಿ ದೂರು ದಾಖಲಾಗದೆ ಇರುವ ಪ್ರಕರಣಗಳನ್ನೂ ಸೇರಿಸಿದರೆ ಪ್ರತಿವರ್ಷ ಒಂದು ಲಕ್ಷಕ್ಕೂ ಹೆಚ್ಚು ಮಕ್ಕಳು ಕಾಣೆಯಾಗುತ್ತಾರೆ.

ಮಕ್ಕಳ ಕಣ್ಮರೆ ಎಂದಾಕ್ಷಣ ಇವತ್ತು ಕ್ರೂರ ಅಪರಾಧಿ ಜಗತ್ತೇ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಆದರೆ ಮಕ್ಕಳ ಕಳ್ಳಸಾಗಣೆ ಆಗುವುದು ಮಾತ್ರ ಈ ಸಮಸ್ಯೆಗೆ ಕಾರಣವಲ್ಲ. ಈ ಸಮಸ್ಯೆಗೆ ಅನೇಕಾನೇಕ ಮುಖಗಳಿವೆ. ಅಪರಾಧ ಎನ್ನುವುದು ಪ್ರಮುಖ ಮುಖವಾದರೂ, ಉಳಿದ ಆಯಾಮಗಳನ್ನು ನಾವು ನಿರ್ಲಕ್ಷಿಸುವಂತಿಲ್ಲ.

ಮಕ್ಕಳ ಕಣ್ಮರೆಯ ಸಮಸ್ಯೆಯನ್ನು ಪ್ರಮುಖವಾಗಿ ಎರಡು ಭಾಗವಾಗಿ ನೋಡಬಹುದು. 1) ಅಪರಾಧ ಲೋಕದ ಹಿನ್ನೆಲೆಯಿಂದ ಹಾಗೂ (Criminal) 2) ಮನೋವೈಜ್ಞಾನಿಕ ಹಿನ್ನೆಲೆಯಿಂದ (Psychological).

ಅಪರಾಧ ಜಗತ್ತಿನ ಕೈಗೆ ಸಿಕ್ಕುಬೀಳುವ ಮಕ್ಕಳ ಬಗ್ಗೆ ನೂರಾರು ಸಾಕ್ಷ್ಯಚಿತ್ರಗಳು, ಸಿನಿಮಾಗಳು ಬಂದಿವೆ. ಅಪರಾಧ ಜಗತ್ತಿನ ಹಿನ್ನೆಲೆಯನ್ನು ಮೊದಲು ವಿಶ್ಲೇಷಿಸಿದರೆ ಅದೊಂದರಲ್ಲೇ ಹತ್ತು ಹಲವು ಅಂಶಗಳಿರುವುದು ಕಾಣುತ್ತವೆ.  ಅವುಗಳನ್ನು ಒಂದೊಂದಾಗಿ ವಿವರಿಸುತ್ತ ಹೋದಂತೆ ಈ ಸಮಸ್ಯೆಯ ತೀವ್ರತೆ ಅರಿವಾಗುತ್ತದೆ.

ಮಕ್ಕಳ ಅಪಹರಣಕ್ಕೆ ಅತ್ಯಂತ ಪ್ರಮುಖ ಕಾರಣ ಭಿಕ್ಷಾಟನೆ. ಈ ಕೆಲಸವನ್ನು ಹಲವಾರು ಅತ್ಯಂತ ಕ್ರೂರ ಹಾಗೂ ನಿರ್ದಯ ಗುಂಪುಗಳು ಅತ್ಯಂತ ವ್ಯವಸ್ಥಿತವಾಗಿ ನಡೆಸುತ್ತವೆ. ದೊಡ್ಡ ದೊಡ್ಡ ನಗರಗಳಲ್ಲಿ ಅಪಹರಿಸಿ ತಂದ ಅನಾಥ ಹಾಗೂ ನಿರ್ಗತಿಕ ಮಕ್ಕಳನ್ನು ಅಂಗವಿಹೀನಗೊಳಿಸಿ ಭಿಕ್ಷಾಟನೆಯಲ್ಲಿ ತೊಡಗಿಸಿ ಅದರಿಂದ ಲಾಭ ಮಾಡಿಕೊಳ್ಳುವ ದಂಧೆ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ಆಫೀಸಿಗೆ ಓಡುವ ಗಡಿಬಿಡಿಯಲ್ಲಿ ರಸ್ತೆ ಬದಿ ಕೈಚಾಚಿ ನಿಂತ ಎಳೆಯನ ಕೈಗೆ ಒಂದು ರೂಪಾಯಿ ಇಟ್ಟು ಧಾವಿಸುವ ನಿಮಗೆ ಗೊತ್ತೇ ಆಗುವುದಿಲ್ಲ– ಈ ಪುಟ್ಟ ಭಿಕ್ಷಾಟನೆ ಮಾಫಿಯಾದ ಬಲಿಪಶುವೆಂದು! ನೀವಿತ್ತ ಒಂದು ರೂಪಾಯಿ ಈ ಭಿಕ್ಷಾಟನಾ ಮಾಫಿಯಾವನ್ನು ಇನ್ನಷ್ಟು ಬಲಪಡಿಸುತ್ತದೆಂದು ದಯಾಮಯಿ ಹೃದಯದ ನಿಮಗಾದರೂ ಹೇಗೆ ಗೊತ್ತಾಗಬೇಕು? ಎಷ್ಟೋ ನಗರಗಳಲ್ಲಿ ಈ ಮಾಫಿಯಾ ಪೊಲೀಸ್ ಹಾಗೂ ಇತರ ಇಲಾಖೆಗಳ ಮೂಗಿನ ಅಡಿಯಲ್ಲೇ ನಡೆಯುತ್ತದೆ.

ಅಪಹರಿಸಿದ ಅಥವಾ ದೊರಕಿದ ಮಕ್ಕಳನ್ನು ಲೈಂಗಿಕ ಶೋಷಣೆಗೆ ಬಳಸಿಕೊಳ್ಳುವುದು ಅತ್ಯಂತ ಸಾಮಾನ್ಯ. ಈ ಲೈಂಗಿಕ ಶೋಷಣೆಗೆ ಹೆಣ್ಣು–ಗಂಡೆಂಬ ಭೇದವಿಲ್ಲ. ಸಾಮಾನ್ಯವಾಗಿ ಕೇವಲ ಹೆಣ್ಣುಮಕ್ಕಳು ಲೈಂಗಿಕ ಶೋಷಣೆಗೆ ಒಳಗಾಗುತ್ತಾರೆ ಎಂಬುದು ತಪ್ಪು ಕಲ್ಪನೆ. ಗಂಡು ಮಕ್ಕಳೂ ಕೂಡ ಅಷ್ಟೇ ಪ್ರಮಾಣದಲ್ಲಿ ಲೈಂಗಿಕ ಶೋಷಣೆಗೆ ಒಳಗಾಗುತ್ತಾರೆ.

ಸಾಮಾನ್ಯವಾಗಿ ನೋಡಲು ಸುಂದರವಾಗಿ ಕಾಣುವ, ಓದಲು ಬರೆಯಲು ಬರುವ ಹೆಣ್ಣುಮಕ್ಕಳನ್ನು ದೊಡ್ಡ  ಶ್ರೀಮಂತರ ಐಶಾರಾಮಿ ಪಾರ್ಟಿಗಳಲ್ಲಿ ಲೈಂಗಿಕ ಕ್ರಿಯೆಗಳಿಗೆ ದೂಡಿದರೆ, ಉಳಿದ ಮಕ್ಕಳನ್ನು ಅತ್ಯಂತ ಕ್ರೂರ ಹಾಗೂ ಅನಾಗರಿಕವಾಗಿ ವೇಶ್ಯಾವೃತ್ತಿಗೆ ದೂಡಲಾಗುತ್ತದೆ. ತೃತೀಯ ದೇಶಗಳು ಮಕ್ಕಳ ವೇಶ್ಯಾವೃತ್ತಿಗೆ  ಹೆಚ್ಚು ಪೂರಕವಾಗಿದ್ದು ಅದನ್ನು ಋಣಾತ್ಮಕವಾಗಿ